ತಾವೆಲ್ಲ ರುದ್ರಮುನಿಯಿಂದಲೇ ಈ ಸ್ಥಾನ ಪಡೆದವರು ಎಂದುಕೊಳ್ಳುತ್ತ ಅದೇ ಹಂಗಿನಲ್ಲಿ ನರಳುತ್ತ ಮೀಟಿಂಗುಗಳ ನಿರ್ಧಾರಕ್ಕೆ ದುಸರಾ ಮಾತನಾಡದೆ ಹೌದಪ್ಪ, ಹೌದಮ್ಮಗಳಾಗಿದ್ದರು. ಈ ಹೌದಪ್ಪ, ಹೌದಮ್ಮಗಳು ಸಾಮಾನ್ಯ ಮನುಷ್ಯರಾಗಿರದೆ ಪ್ರಾಧ್ಯಾಪಕರು, ವೈದ್ಯರು, ಸಾಹಿತಿಗಳು, ನಾಟಕಕಾರರು, ಪತ್ರಕರ್ತರಂತಹ ದೊಡ್ಡ ದೊಡ್ಡವರೇ ಆಗಿದ್ದರು. ಆದರೆ ಇದರಲ್ಲಿ ರುದ್ರಮುನಿಗೆ ದೊಡ್ಡ ತೊಡಕೆನಿಸಿದ್ದು ದೊಡ್ಡ ಮನುಷ್ಯನ ಸಣ್ಣ ಗುರುತುಗಳೂ ಇರದ ಗುರ್ಲಿಂಗ ಮಾತ್ರ.

'ನೋಡಿ ನಮ್ಮ ಸಂಘದಲ್ಲಿ ಬರೀ ಒಂದೇ ಜಾತಿಯವ್ರು ಇದಾರೆ. ಇದು ಕನ್ನಡ ಸಂಘ ಅನ್ನೋದಕ್ಕಿಂತ ಲಿಂಗಾಯತ್ರ ಸಂಘ ಅನ್ನಂಗಿದೆ. ಇನ್ಮೇಲೆ ಲಿಂಗಾಯತ್ರನ್ನು ಬಿಟ್ಟು ಬೇರೆಯವ್ರಿಗೆ ಮಾತ್ರ ಸದಸ್ಯತ್ವ ಕೋಡೋಣ. ಈಗ ನಮ್ಮಲ್ಲಿ ಹರಿಜನ್ರು, ಸಾಬ್ರು, ಕ್ರಿಶ್ಚಿಯನ್ರು ಒಬ್ರೂ ಇಲ್ಲ, ಅವ್ರಿಗೆಲ್ಲಾ ಮೆಂಬರ್ ಮಾಡೋಣ. ಹನ್ನೆರಡನೇ ಶತಮಾನದಲ್ಲಿದ್ದ ಅನುಭವ ಮಂಟಪದಂತೆ ನಮ್ಮ ಸಂಘದಲ್ಲಿ ಎಲ್ಲ ಜಾತಿ ಜನಾಂಗಗಳೂ ಕೂಡಿ ಶರಣರು ಹೇಳಿದಂತೆ..." ಹೀಗೆ ಒಂದು ಮೀಟಿಂಗಿನಲ್ಲಿ ಗುರ್ಲಿಂಗ ತನ್ನ ಯಡವಟ್ಟು ಐಡಿಯಾ ಬಿಡಿಸಿಡುತ್ತಿದ್ದಂತೆ ಅಲರ್ಟ್ ಆದ ಆಗಷ್ಟೇ ರಿಟೈರಾಗಿ ಬಂದಿದ್ದ ಕನ್ನಡ ಪಂಡಿತ ಡಾಕ್ಟರ್ ಆರಾಧ್ಯರು ಗುರ್ಲಿಂಗನ ಮಾತನ್ನು ಅಲ್ಲಿಗೇ ಕತ್ತರಿಸಿ "ಗುರ್ಲಿಂಗ ನಿಲ್ಲಿಸ್ರಿ ಸಾಕು, ಅಲ್ರಿ ನೀವೇ ನೋಡಿ, ಮಂಡ್ಯ ಮೈಸೂರುಗಳ ಸಾಹಿತ್ಯ ಸಂಘಗಳೆಲ್ಲ ಒಕ್ಕಲಿಗರ ಕೈಲೀದಾವೆ, ಬೆಂಗಳೂರು ಶಿವಮೊಗ್ಗ ಕಡೇಲೆಲ್ಲ ಬ್ರಾಹ್ಮಣರೇ ಹಿಡ್ಕಂಡಿದಾರೆ, ದಲಿತರು, ಸಾಬರು ಎಲ್ಲಾ ಈಗ ಅವರವರದ್ದೇ ಒಂದು ಸಂಘ ಮಾಡ್ಕಂಡು ಅವರವ್ರಿಗೆ ಸನ್ಮಾನ ಮಾಡ್ಕಳ್ತ ಇದಾರೆ. ಹಿಂಗಿರ್ಬೇಕಾದ್ರ ಲಿಂಗಾಯಿತ್ರು ಎಲ್ಲಿಗೋಗ್ಬೇಕು ಅಂತ ಹೇಳ್ತೀರಿ?" ಎಂದು ತನ್ನ ಪ್ರಾಮಾಣಿಕ ಬೇಗುದಿಯನ್ನು ಬಿಚ್ಚಿಟ್ಟ. ಕುರಿಗಡ್ಡದ ಪ್ರೊಫೆಸರ್ ರವೀಂದ್ರ ಒಳಗೊಳಗೆ ಆರಾಧ್ಯರು ಹೇಳಿದ್ದು ಕರೆಕ್ಟಾಗಿದೆ ಎಂದುಕೊಂಡರೂ ವಿಷಯಕ್ಕೆ ಬೇರೆಯದೇ ಒಂದು ಟ್ವಿಸ್ಟ್ ಕೊಡುವ ರೀತಿಯಲ್ಲಿ 'ಆರಾಧ್ಯರೇ, ಬೇರೆ ಕಡೆ ಹೇಗೆ ಇದ್ಯೋ ನಂಗೊತ್ತಿಲ್ಲ. ಆದ್ರೆ ನಮ್ಮಲ್ಲಿ ಹಾಗೆಲ್ಲ ಎಲ್ಲಿದೆ? ನಾವು ನಮ್ಮ ಸಂಘದ ಸದಸ್ಯತ್ವದ ಅರ್ಜಿಲೀ ಜಾತಿ ಕಾಲಮ್ಮು ಏನಾರ ಇಟ್ಟೀವ? ಮೆಂಬರಾಗೋರು ಯಾವ ಜಾತಿಯೋರು ಅನ್ನೋದೇ ನಮಗೆ ತಿಳಿದಿರಲ್ಲ. ಸಾಹಿತ್ಯದೊಳಗ ಜಾತಿ ತರಬ್ಯಾಡ್ರಿ' ಎಂದು ಸಿಟ್ಟಾದಂತೆ ವಟಗುಟ್ಟಿದರು. ಪ್ರೊಫೆಸರು ಹೇಳೋದು ಸತ್ಯ ಇದೆಯಲ್ಲ, ಆದ್ರೂ ಒಂದೇ ಜಾತಿಯವ್ರು ನಮ್ಮ ಕನ್ನಡ ಸಂಘದಲ್ಲಿ ಹೆಂಗೆ ಸರ್ಕಂಡ್ರು ಎಂದು ಗುರ್ಲಿಂಗ ತಲೆ ಕೆಡಿಸಿಕೊಳ್ಳತೊಡಗಿದ. ಅಷ್ಟಕ್ಕೂ ತಾನೂ ಆ ಜಾತಿಯವನೇ ಅಲ್ಲವೇ ಅಂತ ಗುರ್ಲಿಂಗನಿಗೆ ಜ್ಞಾನೋದಯವಾಗಿ ಕುಸಿದು ಬೀಳುವಂತಾಯಿತು.

ಹೀಗಿದ್ದರೂ ಗುರ್ಲಿಂಗನನ್ನು ಹೇಗಾದರೂ ಸುಮ್ಮನಿರಿಸಬೇಕು ಎಂದು ಆತ ಹೊಸ ಸದಸ್ಯರನ್ನಾಗಿ ಸೂಚಿಸಿದ ಎಂಟು ಸಾಬರು ಮತ್ತು ದಲಿತರಲ್ಲಿ ಮಾದೇಶನನ್ನು ಸದಸ್ಯನನ್ನಾಗಿ ತೆಗೆದುಕೊಂಡು ಆತನನ್ನು ಅವಿರೋಧ ಚುನಾವಣೆಯಲ್ಲಿ ನಿರ್ದೇಶಕನನ್ನಾಗಿ ಮಾಡಿದಾಗ ತನ್ನ ಜೊತೆಗೆ ಸಂಘ ಬದಲಾಯಿಸಲಿಕ್ಕೆ ಇನ್ನೊಬ್ಬ ಸಿಕ್ಕ ಎಂದು ಗುರ್ಲಿಂಗ ಖುಷಿಯಿಂದ ಬೀಗಿದ. ಆದರೆ ಸಂದರ್ಭ ಎಂಥದಿದ್ದರೂ ಕೇರ್ ಮಾಡದೆ ಸದಾ ಜೋಕ್ ಮಾಡುವ ತನ್ನ ವಿನೋದ ಪ್ರತಿಭೆಯನ್ನು ಪಾಟೀಲಪ್ಪ ಯರ್‍ರಾಬಿರ್‍ರಿ ಹೊಗಳಿದ್ದಕ್ಕೆ ಉಬ್ಬಿ ಹೋದ ಮಾದೇಶ ಸಂಘದ ಕಾರ್ಯಕ್ರಮಗಳಲ್ಲೆಲ್ಲ ನಿರೂಪಣೆಯ ಅವಕಾಶ ಪಡೆದು ದೊಡ್ಡ ಜೋಕರ್ ಎನಿಸಿಕೊಂಡು ಮುಂದಿನ ಬಾರಿ ನಿರ್ದೇಶಕನ ಸ್ಥಾನ ಗಟ್ಟಿಮಾಡಿಕೊಳ್ಳಲು ತಾನೂ ಉಳಿದವರಂತೆ ಹೌದಪ್ಪನಾಗಿ ಹೋಗಿಬಿಟ್ಟ.

ಸಾಹಿತ್ಯದಲ್ಲಿ ದೊಡ್ಡ ಸಾಧನೆ ಮಾಡಿದ್ದಕ್ಕೆ ಸಂಘ ಕೊಡೋ ಪ್ರಶಸ್ತಿಯನ್ನು ತಮ್ಮೋನು ಅಂತ ಯಾರ್‍ಯಾರಿಗೋ ದಯಪಾಲಿಸುತ್ತಿದ್ದುದನ್ನು ನೋಡಿ, ತನ್ನಿಷ್ಟದ ದೇವ್ನೂರು ಮಾದೇವಣ್ಣನ್ನ ಇನ್ನೂ ಯಾಕೆ ಆಯ್ಕೆ ಮಾಡಿಲ್ಲ ಅಂತ ಮೀಟಿಂಗುಗಳಲ್ಲಿ ಸೀರಿಯಸ್ಸಾಗಿ ಕ್ವಶ್ಚನ್ ಮಾಡಿದಾಗಲೆಲ್ಲಾ 'ಮುಂದೆ ನೋಡೋಣ, ಮುಂದೆ ಕೋಡೋಣ' ಅಂತ ಪ್ರತಿ ವರ್ಷ ಮುಂದಾಗ್ತಾನೆ ಬಂದಿದ್ದು ಗುರ್ಲಿಂಗನ ಟೆನ್ಷನ್ನನ್ನು ಹೆಚ್ಚಿಸಿದ ಇನ್ನೊಂದು ಸಂಗತಿಯಾಗಿತ್ತು.

ಮತ್ತೆ ಚುನಾವಣೆ ಬಂದಿತ್ತು.

ಇತ್ತೀಚೆಗೆ ಕನ್ನಡ ಸಂಘ ತನ್ನ ಕೈತಪ್ಪುತ್ತಿದೆ ಎಂದು ರುದ್ರಮುನಿಗೆ ಯಾಕೋ ಅನ್ನಿಸತೊಡಗಿತ್ತು. ನಗರದ ಮಧ್ಯದಲ್ಲಿದ್ದ ಸಂಘದ ನಿವೇಶನ ಕಟ್ಟಡವೀಗ